ದಿನಾಂಕ **24.06.2026** ರಂದು ಪಿ.ಡಬ್ಲೂ-**1** ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ **2, 4** ಮತ್ತು **5**ನೇ ಪ್ರತಿವಾದಿಯರ ಪರ ವಕೀಲರಿಂದಃ-

ನನ್ನ ಮತ್ತು ಪ್ರತಿವಾದಿ ನಂ.2, 4 ಮತ್ತು 5 ರವರ ನಡುವೆ ಜಮೀನಿನ ಗಡಿಗೆ ಸಂಬಂಧಪಟ್ಟಂತೆ ತಕರಾರುಗಳು ಇವೆ ಎಂದರೆ ಸರಿ. ತಕರಾರು ಇದ್ದ ಕಾರಣ ಸದರಿ ಪ್ರತಿವಾದಿಗಳು ಹಿರಿಯರ ಮುಂದೆ ಪಂಚಾಯತಿ ಕರೆದಿದ್ದರು ಎಂದರೆ ಸರಿ. ಹಿರಿಯರು ಎರಡು ಪಕ್ಷಗಾರರಿಗೆ ಕಾನೂನು ರೀತ್ಯ ಸರ್ವೆಗೆ ಅರ್ಜಿ ಹಾಕಿಕೊಳ್ಳಿ ಎಂದು ಸಲಹೆ ಕೊಟ್ಟರು ಎಂದರೆ ಸರಿ. ಆ ಪ್ರಕಾರ ನಾನು, 2, 4 ಮತ್ತು 5ನೇ ಪ್ರತಿವಾದಿಯರು ಸರ್ವೆ ಅಧಿಕಾರಿಗಳಿಗೆ ಅರ್ಜಿ ಕೊಟ್ಟಿದ್ದೆವು ಎಂದರೆ ಸರಿ. ಸದರಿ ಜಮೀನಿನ ಅಳತೆ ನಂತರ ಮೇಲೆ ಹೇಳಿದ 2, 4 ಮತ್ತು 5ನೇ ಪ್ರತಿವಾದಿಗಳು ನನ್ನ ಜಮೀನಿನಲ್ಲಿ 32 ಗುಂಟೆ ಜಮೀನು ಅತಿಕ್ರಮಣ ಮಾಡಿದ್ದಾರೆ ಎಂದು ವರದಿ ಹಾಕಿದ್ದಾರೆ ಎಂದರೆ ಸರಿ. ಸದರಿ 32 ಗುಂಟೆ ಜಮೀನನ್ನು ಬಿಟ್ಟು ಕೊಡಲು ಮೇಲಿನ ಪ್ರತಿವಾದಿಗಳು ತಯಾರಿದ್ದಾರೆ ಎಂದರೆ ಸರಿ. ಆದರೂ ಕೂಡಾ ಅವರ ಮೇಲೆ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

VAIDYA SHREEKANT
Digitally signed by VAIDYA SHREEKANT
Date: 2026.06.24 17:42:29 +0530

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.